# ಮೆ|| ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂಡಾಧಿಕಾರಿಗಳು, ನರಗುಂದ

**ಸಿಸಿ ನಂ.6/2022**

**ಚಾಸಾಃ 4/ಫ್ರಾಸಾಃ 3**

**ದಿನಾಂಕಃ07-04-2026**

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| **ಸಾಕ್ಷಿದಾರರ ಹೆಸರು** | ನೀಲಪ್ಪ ಬಾರಕೇರ |
| ತಂದೆ/ಗಂಡನ ಹೆಸರು | ಶಿವಪ್ಪ |
| ವಯಸ್ಸು | 35 ವರ್ಷ |
| ಉದ್ಯೋಗ | ಪಿಸಿ, 558 ನರಗುಂದ ಪೋಲಿಸ ಠಾಣೆ |
| ವಾಸ | ನರಗುಂದ |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದ**

ಮೇ 2021 ರಿಂದ ಇಲ್ಲಿಯವರೆಗೆ ನಾನು ನರಗುಂದ ಪೋಲಿಸ ಠಾಣೆಯಲ್ಲಿ ಪಿಸಿ ನಂ.558 ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ15-11-2021 ರಂದು ಮುಂಜಾನೆ 7.00 ಗಂಟೆಯ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ, ಚಾಸಾ 1 ರವರು ನನ್ನನ್ನು ಮತ್ತು ಚಾಸಾ-5 ರವರನ್ನು ತಮ್ಮ ಕಚೇರಿಗೆ ಕರೆದು ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಸೂಚನೆ ನೀಡಿರುತ್ತಾರೆ. ಆ ಪ್ರಕಾರ ನಾನು ಮತ್ತು ಚಾಸಾ-5 ಸೇರಿ ಪಟ್ಟಣದ ಶಿವಾಜಿ ಸರ್ಕಲ ಹತ್ತಿರ ನಿಂತಿದ್ದ ಚಾಸಾ-2 ಮತ್ತು 3 ರವರನ್ನು ಕರೆದುಕೊಂಡು ಬಂದು ಚಾಸಾ 1 ರವರ ಮುಂದೆ ಹಾಜರು ಪಡಿಸಿರುತ್ತೇವೆ. ನಂತರ ಚಾಸಾ 1 ರವರು ಸದರಿ ಪಂಚರಿಗೆ ಮತ್ತು ನಮ್ಮನ್ನು ಉದ್ದೇಶಿಸಿ  ನರಗುಂದ ಪಟ್ಟಣದ ಶಿವಾಜಿ ಸರ್ಕಲ ಕಡೆಯಿಂದ ಹುಣಶಿಕಟ್ಟಿ ಕಡೆಗೆ ನೀಲಿ ಬಣ್ಣದ ಲುಂಗಿ ಮತ್ತು ಬೂದು ಬಣ್ಣದ ಸ್ವೇಟರ ಧರಿಸಿದ ಒಬ್ಬ ವ್ಯಕ್ತಿಯು ಒಂದು ಚೀಲದಲ್ಲಿ ಅಕ್ರಮವಾಗಿ ಮದ್ಯದ ಪ್ಯಾಕೆಟಗಳನ್ನು ತೆಗೆದುಕೊಂಡು ನಡೆದುಕೊಂಡು ಹೋಗುತ್ತಿರುವ ಬಗ್ಗೆ ದೂರವಾಣಿ ಮೂಲಕ ಬಂದ ಮಾಹಿತಿಯನ್ನು ತಿಳಿಸಿದ್ದು, ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಚಾಸಾ 2, 3 ರವರನ್ನು ಕೇಳಿಕೊಂಡಿರುತ್ತಾರೆ. ಅದಕ್ಕೆ ಸದರಿ ಪಂಚರು ಒಪ್ಪಿ ಕೊಂಡಿರುತ್ತಾರೆ. ನಂತರ ಚಾಸಾ-1 ರಿಂದ 3, 5 ರವರೊಂದಿಗೆ 7-15 ಗಂಟೆಗೆ ಕಚೇರಿಯಿಂದ ಹೊರಟು ಹುಣಶಿಕಟ್ಟಿ ರಸ್ತೆಯಲ್ಲಿರುವ oil mill ಹತ್ತಿರ ಹೋಗಿದ್ದು, ಮರೆಯಲ್ಲಿ ವಾಹನ ನಿಲ್ಲಿಸಿ ವಿಕ್ಷಣೆ ಮಾಡುತ್ತಾ ನಿಂತಿರುತ್ತೇವೆ. ಅಂದಾಜು 7.40 ಗಂಟೆಯ ಸಮಯದಲ್ಲಿ ಒಬ್ಬ ಅನುಮಾನಾಸ್ಪದ ವ್ಯಕ್ತಿಯು ನರಗುಂದ ಕಡೆಯಿಂದ ಹೆಗಲ ಮೇಲೆ ಚೀಲ ಹೊತ್ತಿಕೊಂಡು ನಡೆದುಕೊಂಡು ಬರುತ್ತಿರುವುದು ಕಂಡು ಬಂದಿರುತ್ತದೆ. ಕೂಡಲೇ ನಾವು ಆತನನ್ನು ಹಿಡಿದು, ಸದರಿ ಚೀಲದಲ್ಲಿರುವ ವಸ್ತುಗಳ ಬಗ್ಗೆ ವಿಚಾರಿಸಿದ್ದು ಆಗ ಸದರಿ

ವ್ಯಕ್ತಿಯು ಸರಿಯಾಗಿ ಉತ್ತರಿಸಿರುವುದಿಲ್ಲ. ನಂತರ ಪಂಚರ ಸಮಕ್ಷಮ ಚಾಸಾ 1 ರವರು ಆತನಿಂದ ವಶಪಡಿಸಿಕೊಂಡ ಚಿಲವನ್ನು ಪರಿಶೀಲನೆ ಮಾಡಿದಾಗ ಅದರಲ್ಲಿ 90 ml ನ ಒರಿಜಿನಲ ಚಾಯ್ಸ ಡಿಲಕ್ಸ ವಿಸ್ಕಿಯ 35 ಮಧ್ಯದ ಪ್ಯಾಕೆಟಗಳು ಇರುವುದು ಕಂಡು ಬಂದಿರುತ್ತದೆ. ನಂತರ ಚಾಸಾ 1 ರವರು ಆತನ ಹೆಸರನ್ನು ವಿಚಾರಿಸಿದಾಗ ಆತ ತನ್ನ ಹೆಸರು ಹಣಮಂತ ರಾಮದುರ್ಗ, ಸಾಃ ಜಗಾಪೂರ ಎಂದು ತಿಳಿಸಿರುತ್ತಾನೆ. ಮುಂದುವರೆದು ಸದರಿ ಮಧ್ಯದ ಪ್ಯಾಕಟೆಗಳನ್ನು ಜಗಾಪೂರ ಗ್ರಾಮದಲ್ಲಿ ಸಾರ್ವಜನಿಕರಿಗೆ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಸಹ ಒಪ್ಪಿ ಕೊಂಡಿರುತ್ತಾನೆ. ನಂತರ ಚಾಸಾ 1 ರವರು ಸದರಿ ಎಲ್ಲ ಮಧ್ಯದ ಪ್ಯಾಕೆಟಗಳನ್ನು ಅದೇ ಚೀಲದಲ್ಲಿ ಹಾಕಿ ಬಟ್ಟೆಯಿಂದ ಸುತ್ತಿ ಸೀಲ ಮಾಡಿದ್ದು,ಅದರ ಮೇಲೆ ತಮ್ಮ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತಾರೆ. ಆ ಕುರಿತು ಚಾಸಾ 1 ರವರು ಬೆಳಿಗ್ಗೆ 7.40 ರಿಂದ 8.40 ರವರೆಗೆ ಸ್ಥಳದಲ್ಲಿಯೇ ಪಂಚರ ಸಮಕ್ಷಮ ನಿಪಿ-1 ರಂತೆ ಸ್ಥಳ ಪಂಚನಾಮೆ ಜರುಗಿಸಿರುತ್ತಾರೆ. ನಂತರ ವಶಪಡಿಸಿಕೊಂಡ ವ್ಯಕ್ತಿ, ವಸ್ತು ಮತ್ತು ದಾಖಲೆಗಳೊಂದಿಗೆ ಕಚೇರಿಗೆ ಬಂದಿದ್ದು ದಾಳಿಯ ಕುರಿತು ಚಾಸಾ 1 ರವರು ಚಾಸಾ-9 ರವರಿಗೆ ಲಿಖಿತ ದೂರು ಸಲ್ಲಿಸಿರುತ್ತಾರೆ. ಪ್ರಕರಣದ ಕುರಿತು ಅದೇ ದಿನ ಪ್ರಕರಣದ ಕುರಿತು ಚಾಸಾ 9 ರವರ ಮುಂದೆ ಹೇಳಿಕೆ ನೀಡಿರುತ್ತೇನೆ. ದಾಳಿಯ ಸಮಯದಲ್ಲಿ ವಶಪಡಿಸಿಕೊಂಡ ಮುದ್ದೆ ಮಾಲುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಚೀಲದಲ್ಲಿರುವ ಮಧ್ಯದ ಪ್ಯಾಕೆಟಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ಚೀಲದೊಂದಿಗೆ ಈಗಾಗಲೇ ಮು.ಮಾ. 1 ಎಂದು ಗುರುತಿಸಲಾಗಿದೆ. ದಾಳಿಯ ಸಮಯದಲ್ಲಿ ಬಂಧಿಸಿದ ವ್ಯಕ್ತಿ ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿತನಾಗಿದ್ದಾನೆ.

**<u>ಪಾಟೀ ಸವಾಲುಃ ಶ್ರೀ ವಿ ಎ ಎಮ್ ಆರೋಪಿತನ ಪರ ವಕೀಲರಿಂದಃ</u>**

ದಿಃ 15-11-2021 ರಂದು ಚಾಸಾ 1 ರವರು ಪಂಚರನ್ನು ಕರೆದುಕೊಂಡು ಬರವಂತೆ ನಮಗೆ ಸೂಚನೆ ನೀಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಾಜಿ ಸರ್ಕಲದಿಂದ ಪಂಚರನ್ನು ಕರೆದುಕೊಂಡು ಬಂದಿರುತ್ತೇವೆ. ಆಗ ಸಮಯ 7.15 ಗಂಟೆಯಾಗಿತ್ತು. ಸದರಿ ವಿಷಯದ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಚಾಸಾ 1 ರವರು ನೀಡಿದ ಮಾಹಿತಿಯ ಮೇರೆಗೆ ಕೃತ್ಯ ಸ್ಥಳಕ್ಕೆ ಹೋಗಿರುತ್ತೇವೆ ಎಂದು, ಪಂಚರ ಸಮಕ್ಷಮ ಆರೋಪಿತನ ವಿರುದ್ಧ ಅಬಕಾರಿ ದಾಳಿ ಜರುಗಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನು ತನ್ನ ಎಡ ಹೆಗಲ ಮೇಲೆ ಚೀಲ ಹೊತ್ತು ಕೊಂಡು ಬರುತ್ತಿದ್ದನು. ಒಂದೇ ಚೀಲ ಹೊತ್ತುಕೊಂಡು ಬರುತ್ತಿದ್ದನು. ಸದರಿ ವಿಷಯದ ಕುರಿತು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತನನ್ನು ವಿಚಾರಣೆ ಮಾಡಿದಾಗ ಆತ ತನ್ನ ಹೆಸರು ಹಣಮಂತ ರಾಮದುರ್ಗ ಎಂದು ಮತ್ತು ಮು.ಮಾ.ಗಳನ್ನು ಜಗಾಪೂರ ಗ್ರಾಮದಲ್ಲಿ ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿದ್ದೇನು ಎಂದು ಒಪ್ಪಿಕೊಂಡಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ಆರೋಪಿತನಿಂದ ಮು.ಮಾ.ಗಳನ್ನು ವಶಪಡಿಸಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಸ್ಥಳದಲ್ಲಿ ಪಂಚನಾಮೆ ಜರುಗಿಸಿ ಸದರಿ ಮು.ಮಾ.ಗಳನ್ನು ಜಪ್ತು ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ,

ಆರೋಪಿತನಿಗೂ ಹಾಗೂ ಮು.ಮಾ.ಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ ದಿನ ಆರೋಪಿತನ ವಿರುದ್ಧ ಯಾವುದೇ ದಾಳಿ ಜರುಗಿಸಿಲ್ಲ ಮತ್ತು ಆತನಿಂದ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಕಚೇರಿಯ ಅಂಕಿ ಅಂಶಗಳಿಗಾಗಿ ಚಾಸಾ 1 ರವರ ದಾಖಲಿಸಿರುವ ಸುಳ್ಳ ದೂರಿಗೆ ಪೂರಕವಾಗಿ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ .

ಜೆ ಎಂ ಎಫ್ ಸಿ ನರಗುಂದ